# ಸ್ವಾಮಿ ವಿವೇಕಾನಂದ : ಒಂದು ದಿವ್ಯಸ್ಮೃತಿ

ಕೆ.ಸುಂದರರಾಮ ಅಯ್ಯರ್

*ಸ್ವಾಮಿ ವಿವೇಕಾನಂದರನ್ನು ಅವರ ಪರಿವ್ರಾಜಕ ದಿನಗಳಲ್ಲಿ ತಮ್ಮ ಮನೆಯ ಅತಿಥಿಗಳಾಗಿ ಉಳಿಸಿಕೊಳ್ಳುವ ಭಾಗ್ಯ ಟ್ರಿವೆಂಡ್ರಂನ ಕೆ. ಸುಂದರರಾಮ ಅಯ್ಯರ್ ಅವರದಾಗಿತ್ತು. ಸ್ವಾಮೀಜಿಯವರು ತಮ್ಮ ಮನೆಯಲ್ಲಿ ತಂಗಿದ್ದ ಒಂಬತ್ತು ದಿನಗಳ ಪುಣ್ಯಸ್ಮೃತಿಯನ್ನು ದಾಖಲಿಸಿರುವ "ಸ್ವಾಮಿ ವಿವೇಕಾನಂದರ ದಿವ್ಯಸ್ಮೃತಿ" ಎಂಬ ಗ್ರಂಥದಿಂದ ಆಯ್ದ ಭಾಗವಿದು. ಈ ಗ್ರಂಥ ಮೈಸೂರು ರಾಮಕೃಷ್ಣ ಆಶ್ರಮದಿಂದ ಪ್ರಕಟವಾಗಿದೆ.*



*ಟ್ರಿವೆಂಡ್ರಮ್‌ನಲ್ಲಿ ಸ್ವಾಮಿ ವಿವೇಕಾನಂದರು*

೧೮೯೨ರ ಡಿಸೆಂಬರ್‌ನಲ್ಲಿ ನಾನು ಸ್ವಾಮಿ ವಿವೇಕಾನಂದರನ್ನು ಪ್ರಥಮ ಬಾರಿಗೆ ಟ್ರಿವೆಂಡ್ರಂನಲ್ಲಿ ಸಂಧಿಸಿದೆ. ನನಗೆ ಅವರ ಸಾಕಷ್ಟು ಪರಿಚಯವಾಗಿದ್ದು ಆ ಸಂದರ್ಭದಲ್ಲಿಯೆ. ಅವರು ಪರಿವ್ರಾಜಕರಾಗಿ ಭಾರತದ ಉದ್ದಗಲವನ್ನು ಸಂದರ್ಶಿಸುತ್ತಿದ್ದ ಸಂದರ್ಭದಲ್ಲಿ ಟ್ರಿವೆಂಡ್ರಂಗೆ ಬಂದರು. ಒಬ್ಬ ಮುಸ್ಲಿಂ ಮಾರ್ಗದರ್ಶಕನೊಡನೆ ಅವರು ನಮ್ಮ ಮನೆಗೆ ಬಂದಿದ್ದರು. ನನ್ನ ಹನ್ನೆರಡು ವರ್ಷದ ಮಗ ಅವರನ್ನು ನೋಡಿ ಒಬ್ಬರು ಮುಸ್ಲಿಮರು ಬಂದಿರುವುದಾಗಿ ಹೇಳಿದ. ಅವರ ಉಡುಪು ದಕ್ಷಿಣ ಭಾರತದ ಹಿಂದೂಸಂನ್ಯಾಸಿಗಳಲ್ಲಿ ಸಾಮಾನ್ಯವಾಗಿ ಕಂಡುಬರುತ್ತಿರಲಿಲ್ಲ. ಅದಕ್ಕಾಗಿಯೇ ನನ್ನ ಮಗ ಹಾಗೆ ಭಾವಿಸಿದ್ದ. ಅವರು ಸಂನ್ಯಾಸಿಗಳೆಂದು ತಿಳಿದಮೇಲೆ ಅವರನ್ನು ಒಳಗೆ ಕರೆದು ಕುಳ್ಳಿರಿಸಿ ಆದರದಿಂದ ಮಾತನಾಡಿಸಿದೆ. ಮೊಟ್ಟ ಮೊದಲು ಅವರು ಕೇಳಿಕೊಂಡದ್ದು ತಮ್ಮೊಡನೆ ಬಂದಿದ್ದ ಮುಸ್ಲಿಮನಿಗೆ ಊಟದ ವ್ಯವಸ್ಥೆ ಮಾಡಬೇಕೆಂದು. ಆತ ಕೊಚ್ಚಿನ್ ರಾಜ್ಯದಲ್ಲಿ ಕಾರಕೂನನಾಗಿದ್ದ, ಮತ್ತು ಅಲ್ಲಿಯ ದಿವಾನ್ ಶ್ರೀ ಡಬ್ಲ್ಯೂ. ರಾಮಯ್ಯನವರು ಇವರೊಡನೆ ಆತನನ್ನು ಕಳಿಸಿದ್ದರು. ಸ್ವಾಮೀಜಿ ತಮ್ಮ ವಿಚಾರವಾಗಿ ಏನೂ ಹೇಳಲಿಲ್ಲ. ಟ್ರಿವೆಂಡ್ರಂಗೆ ಬರುವ ದಾರಿಯಲ್ಲಾಗಲಿ ಅಥವಾ ಟ್ರಿವೆಂಡ್ರಂಗೆ ಬಂದ ಮೇಲಾಗಲಿ ತಮಗಾಗಿ ಯಾವ ವ್ಯವಸ್ಥೆಯನ್ನೂ ಮಾಡಿಕೊಂಡಿರಲಿಲ್ಲ. ಅವರು ಎರಡು ದಿನಗಳಿಂದ ಸ್ವಲ್ಪ ಹಾಲನ್ನಲ್ಲದೆ ಮತ್ತಿನ್ನೇನೂ ತೆಗೆದುಕೊಂಡಿರಲಿಲ್ಲ. ಆದರೂ ಆ ಮುಸ್ಲಿಂ ಕಾರಕೂನ ಊಟ ಮುಗಿಸಿ ಹೊರಟುಹೋದ ಮೇಲೆಯೇ ಅವರು ತಮ್ಮ ಕಡೆ ಗಮನ ಹರಿಸಿದ್ದು.

ಕೆಲವು ನಿಮಿಷಗಳ ಮಾತಿನಿಂದ ಈ ಸ್ವಾಮಿಗಳು ಅಸಾಮಾನ್ಯ ವ್ಯಕ್ತಿ ಎಂದು ನನಗೆ ತಿಳಿದುಬಂತು. ಅವರು ಎರ್ನಾಕುಲಂನಿಂದ ಹೊರಟಮೇಲೆ ಏನೂ ಆಹಾರ ತೆಗೆದುಕೊಂಡಿಲ್ಲವೆಂದು ತಿಳಿದಮೇಲೆ, ತಾವು ಏನು ಆಹಾರ ಸ್ವೀಕರಿಸುವುದಾಗಿ ನಾನವರನ್ನು ಕೇಳಿದೆ. ಅವರಂದರು : "ಏನು ಕೊಡುತ್ತೀರೊ ಅದು. ನಾವು ಸಂನ್ಯಾಸಿಗಳು, ಅದೇ ಬೇಕು ಇದೇ ಬೇಕು ಎಂಬುದೇನಿಲ್ಲ." ಊಟಕ್ಕೆ ಸ್ವಲ್ಪ ಸಮಯವಿದ್ದುದರಿಂದ ನಾವು ಮಾತು ಪ್ರಾರಂಭಿಸಿದೆವು. ಸ್ವಾಮೀಜಿ ಬಂಗಾಳಿಯೆಂದು ತಿಳಿದಾಗ ಬಂಗಾಳಿಗಳು ಅನೇಕ ಶ್ರೇಷ್ಠ ವ್ಯಕ್ತಿಗಳನ್ನು ನೀಡಿರುವರು; ಅವರಲ್ಲಿ ಬ್ರಹ್ಮಸಮಾಜದ ಮುಂದಾಳು ಕೇಶವಚಂದ್ರ ಸೇನ್ ಅತಿ ಮುಖ್ಯ—ಎಂದು ನಾನು ಅಭಿಪ್ರಾಯಪಟ್ಟೆ. ಆಗ ಸ್ವಾಮೀಜಿ ತಮ್ಮ ಗುರು ಶ್ರೀರಾಮಕೃಷ್ಣರ ಹೆಸರನ್ನು ಸೂಚಿಸಿ ಅವರ ಆಧ್ಯಾತ್ಮಿಕ ಔನ್ನತ್ಯದ ಬಗ್ಗೆ ಸಂಕ್ಷಿಪ್ತವಾಗಿ ವಿವರಿಸಿದರು. ಅವರ ಮುಂದೆ ಕೇಶವಚಂದ್ರ ಸೇನ್ ಕೇವಲ ಮಗುವೆಂದು ಸ್ವಾಮೀಜಿ ಹೇಳಿದಾಗ ನಾನು ಅವಾಕ್ಕಾದೆ. ಕೇಶವನು ಮಾತ್ರವಲ್ಲ ಆಗಿನ ಕಾಲದ ಇನ್ನೂ ಅನೇಕ ಶ್ರೇಷ್ಠ ಬಂಗಾಳಿಗಳು ಅವರಿಂದ ಪ್ರಭಾವಿತರಾಗಿರುವರು; ಅವರಿಂದ ಸ್ಫೂರ್ತಿಯನ್ನು ಪಡೆದು ಮುಂದೆ ಕೇಶವನ ಜೀವನದಲ್ಲಿ ಗಮನಾರ್ಹ ಪರಿವರ್ತನೆಯಾಯಿತು; ಅನೇಕ ಐರೋಪ್ಯರೂ ಶ್ರೀರಾಮಕೃಷ್ಣರ ಸಾನ್ನಿಧ್ಯವನ್ನು ಅಪೇಕ್ಷಿಸಿ ದೈವೀಪುರುಷರೆಂದು ಪರಿಗಣಿಸಿರುವರು; ಬಂಗಾಳದ ಪಬ್ಲಿಕ್ ಇನ್‌ಸ್ಟ್ರಕ್ಷನ್‌ನ ನಿರ್ದೇಶಕ ಸಿ. ಹೆಚ್. ಟಾನಿಯಂಥ ಗಣ್ಯವ್ಯಕ್ತಿ ಈ ಮಹಾಪುರುಷನ ಪ್ರತಿಭೆ, ಉದಾರ ಭಾವನೆ, ಆಧ್ಯಾತ್ಮಿಕ ಶಕ್ತಿ ಇವುಗಳ ಬಗ್ಗೆ ಒಂದು ಲೇಖನವನ್ನೇ ಬರೆದಿರುವನು—ಸ್ವಾಮೀಜಿಯವರಿಂದ ಈ ವಿಷಯಗಳನ್ನೆಲ್ಲ ಕೇಳಿ ನನಗೆ ಅತ್ಯಾಶ್ಚರ್ಯವಾಯಿತು.

ಈ ಎಲ್ಲ ಮಾತಿನ ನಂತರ ಸ್ವಾಮೀಜಿ ತಮ್ಮ ಎರಡು ದಿನದ ಉಪವಾಸವನ್ನು ಅಂತ್ಯಗೊಳಿಸಿದರು. ಸ್ವಾಮೀಜಿಯವರ ಸಾನ್ನಿಧ್ಯ, ಅವರ ಧ್ವನಿ, ಅವರ ಹೊಳೆಯುವ ಕಣ್ಣುಗಳು, ಅವರ ವಾಕ್ಕುಶಲತೆ, ಅವರ ಅಪೂರ್ವ ವಿಷಯಸಂಪತ್ತು ನನ್ನನ್ನು ಎಷ್ಟು ಮುಗ್ಧಗೊಳಿಸಿದವೆಂದರೆ ಅಂದು ಮಾರ್ತಾಂಡವರ್ಮರ ಅರಮನೆಯಲ್ಲಿ ನನ್ನ ಕೆಲಸಕ್ಕೆ ಹೋಗಲೇ ಇಲ್ಲ. ಊಟವಾದ ಮೇಲೆ ಅವರು ಸ್ವಲ್ಪ ವಿಶ್ರಮಿಸಿದರು. ಅನಂತರ ಸಂಜೆ ನಾನವರನ್ನು ಟ್ರಿವೆಂಡ್ರಂ ಕಾಲೇಜಿನ ರಸಾಯನ ಶಾಸ್ತ್ರದ ಪ್ರಾಧ್ಯಾಪಕರಾದ

ಪ್ರೊ.ರಂಗಾಚಾರ್ಯರ ಮನೆಗೆ ಕರೆದುಕೊಂಡು ಹೋದೆ. ರಂಗಾಚಾರ್ಯರು ಪ್ರಕಾಂಡ ಪಂಡಿತರೆಂದೂ ವಿಜ್ಞಾನವನ್ನು ಚೆನ್ನಾಗಿ ಬಲ್ಲವರೆಂದೂ ದಕ್ಷಿಣ ಭಾರತದಲ್ಲೇ ಪ್ರಸಿದ್ಧರಾಗಿದ್ದರು. ಅವರು ಮನೆಯಲ್ಲಿಲ್ಲದೆ ಇದ್ದುದರಿಂದ ಟ್ರಿವೆಂಡ್ರಂ ಕ್ಲಬ್ಬಿಗೆ ಹೋದೆವು. ಅಲ್ಲಿ ಸ್ವಾಮೀಜಿಯವರನ್ನು ನೆರೆದಿದ್ದವರಿಗೆಲ್ಲ ಪರಿಚಯ ಮಾಡಿಸಿದೆ. ಅನಂತರ ರಂಗಾಚಾರ್ಯರೂ ಅಲ್ಲಿಗೆ ಬಂದಮೇಲೆ ಅವರಿಗೂ ಪರಿಚಯ ಮಾಡಿಸಿದೆ. ಅಲ್ಲಿ ನಡೆದ ಒಂದು ಘಟನೆ, ಅತ್ಯಂತ ಸಾಮಾನ್ಯವಾದರೂ, ಸ್ವಾಮೀಜಿಯವರ ಅತ್ಯಂತ ವೈಶಿಷ್ಟ್ಯಪೂರ್ಣ ಗುಣವನ್ನು ಬೆಳಕಿಗೆ ತಂದಿತು. ಹೇಗೆ ಅವರು ಪ್ರತಿಯೊಂದನ್ನೂ ಕಣ್ಣಿನ ಮೇಲೆ ಕಣ್ಣಿಟ್ಟು ಪರಿಶೀಲಿಸುತ್ತಿದ್ದರೆಂಬುದನ್ನೂ, ಹೇಗೆ ಅವರಲ್ಲಿ ನಯವಿನಯದೊಡನೆ ವಿರೋಧಿಗಳನ್ನು ಬಹುಬೇಗ ತಣ್ಣಗಾಗಿಸುವ ಶಕ್ತಿ ಇತ್ತೆಂಬುದನ್ನೂ ಈ ಘಟನೆ ತೋರಿಸುತ್ತದೆ.

ಆ ಕ್ಲಬ್ಬಿನಲ್ಲಿ ನನ್ನ ಸ್ನೇಹಿತರಾದ ನಾರಾಯಣ ಮೆನನ್, ಮತ್ತು ಬ್ರಾಹ್ಮಣರಾದ ದಿವಾನ್ ಪೇಶ್ಕಾರ್ ಇದ್ದರು. ನಾರಾಯಣ ಮೆನನ್ ಹೊರಡುವಾಗ ದಿವಾನ್ ಪೇಶ್ಕಾರರಿಗೆ ಕೈಜೋಡಿಸಿ ನಮಸ್ಕರಿಸಿದರು. ಪೇಶ್ಕಾರ್ ಪ್ರತಿನಮಸ್ಕಾರ ಮಾಡುವಾಗ ಹಳೆಯ ಕಾಲದ ಬ್ರಾಹ್ಮಣರು ಶೂದ್ರರಿಗೆ ವಂದಿಸುವ ಪದ್ಧತಿಯನ್ನೇ ಅನುಸರಿಸಿ ಎಡಗೈಯನ್ನು ಬಲಗೈಗಿಂತ ಸ್ವಲ್ಪ ಮೇಲೆತ್ತಿದರು. ಕ್ಲಬ್ಬಿಗೆ ಅನೇಕರು ಬಂದು ಹೋಗುತ್ತಿದ್ದರು. ಕೊನೆಯಲ್ಲಿ ನಾವೈವರು—ಸ್ವಾಮೀಜಿ, ನಾನು, ದಿವಾನ್ ಪೇಶ್ಕಾರ್, ಅವರ ಸೋದರ, ಮತ್ತು ಪ್ರೊ.ರಂಗಾಚಾರ್ಯ—ಉಳಿದೆವು. ನಾವು ಹೊರಡುವಾಗ ದಿವಾನ್ ಪೇಶ್ಕಾರ್ ಸ್ವಾಮೀಜಿಯವರಿಗೆ ಗೌರವದಿಂದ ನಮಸ್ಕರಿಸಿದರು. ಸ್ವಾಮೀಜಿ ಹಿಂದೂ ಸನ್ಯಾಸಿಗುಚಿತವಾದ ರೀತಿಯಲ್ಲಿ ಕೇವಲ ನಾರಾಯಣ ಎಂದಷ್ಟೇ ಹೇಳಿದರು. ಪೇಶ್ಕಾರರಿಗೆ ಕೋಪ ನೆತ್ತಿಗೇರಿತು. ತಾವು ನಮಸ್ಕರಿಸಿದಂತೆಯೇ ಸ್ವಾಮೀಜಿಯವರು ತಮಗೆ ಪ್ರತಿನಮಸ್ಕಾರ ಮಾಡಬೇಕೆಂದು ಅವರು ನಿರೀಕ್ಷಿಸಿದ್ದರು. ಸ್ವಾಮೀಜಿ ಸರಿಯಾದ ಉತ್ತರ ನೀಡಿದರು : "ನೀವು ನಾರಾಯಣ ಮೆನನ್‌ರಿಗೆ ನಮಸ್ಕರಿಸುವಾಗ ನಿಮ್ಮ ಪದ್ಧತಿಯನ್ನು ಅನುಸರಿಸಿದಿರಿ, ಈಗ ನಾನು ಸನ್ಯಾಸಿಯ ಪದ್ಧತಿಗನುಗುಣವಾಗಿ ಪ್ರತಿನಮಸ್ಕಾರ ಮಾಡಿದರೆ ನೀವೇಕೆ ಕೋಪಿಸಿಕೊಳ್ಳಬೇಕು?" ಈ ಉತ್ತರ ಫಲಕಾರಿಯಾಯಿತು—ಮರುದಿನ ಪೇಶ್ಕಾರರ ತಮ್ಮನು ಬಂದು ಹಿಂದಿನ ದಿನದ ಘಟನೆಯ ಬಗ್ಗೆ ಕ್ಷಮೆ ಕೋರಿದರು.

ಸ್ವಾಮೀಜಿ ಕ್ಲಬ್ಬಿನಲ್ಲಿ ಕಳೆದ ಸಮಯ ಅತ್ಯಲ್ಪವಾದರೂ ಅವರ ವ್ಯಕ್ತಿತ್ವ ಎಲ್ಲರ ಮೇಲೆ ಪ್ರಭಾವ ಬೀರಿತು. ಟ್ರಿವೆಂಡ್ರಂನ ಹಿಂದೂ ಸಮಾಜ ತೀರ ವೈವಿಧ್ಯಮಯವಾದುದು—ಎಲ್ಲ ವರ್ಣಗಳ ಮತ್ತು ಎಲ್ಲ ಜನಾಂಗದ ಮಿಶ್ರಣವನ್ನು ಆ ಚಿಕ್ಕ ಪಟ್ಟಣದಲ್ಲಿ ಕಾಣಬಹುದಿತ್ತು. ಟ್ರಿವೆಂಡ್ರಂ ಕ್ಲಬ್ ಇದನ್ನು ಪ್ರತಿನಿಧಿಸುತ್ತಿತ್ತು. ಅಲ್ಲಿ ನೆರೆಯುತ್ತಿದ್ದ ವಿದ್ಯಾವಂತ ವ್ಯಕ್ತಿಗಳಲ್ಲಿ ಈ ಎಲ್ಲ ಬಗೆಯ ಜನರನ್ನು ಕಾಣಬಹುದಿತ್ತು. ಸ್ವಾಮೀಜಿ ಎಲ್ಲರೊಡನೆ ಬಿಚ್ಚು ಮನಸ್ಸಿನಿಂದ ಮಾತನಾಡಿದರು. ಪ್ರೊ. ರಂಗಾಚಾರ್ಯರ ಬಹುಮುಖ ಪ್ರತಿಭೆಗೆ ತಲೆದೂಗಿದರು. ವಿಶ್ವಕೋಶದಂತಿದ್ದ ಅವರ ಜ್ಞಾನಸಂಪತ್ತು, ಅವರ ವಾಕ್ಚಾತುರ್ಯ, ಯಾವುದೇ ವಿಷಯದ ಮೇಲಾದರೂ ಬಹುಬೇಗನೆ ತಮ್ಮ ವಾದವನ್ನು ಸೂಕ್ತವಾಗಿ ಮಂಡಿಸುವ ಸಾಮರ್ಥ್ಯ, ಇತರರಲ್ಲಿ ಒಳ್ಳೆಯ ಮತ್ತು ಉದಾತ್ತ ಗುಣಗಳನ್ನೂ ಪ್ರಕೃತಿ ಮತ್ತು ಕಲೆಯಲ್ಲಿ ಸೌಂದರ್ಯವನ್ನೂ ಕಂಡು ಸ್ಪಂದಿಸುವ ಅವರ ಭಾವನಾತ್ಮಕ ಮನೋಧರ್ಮ—ಇವು ಸ್ವಾಮೀಜಿಯವರ ಗಮನವನ್ನು ಸೆಳೆಯದೆ ಇರಲಿಲ್ಲ. ಆದರೆ ಅವರು ತಾವು ಹಿಂದೂಗಳಲ್ಲ, ದ್ರಾವಿಡರೆಂದು ತಮ್ಮನ್ನು ಪರಿಗಣಿಸುವರೆಂದು ತಿಳಿದಾಗ ಸ್ವಾಮೀಜಿಯವರಿಗೆ ತುಂಬ ಅಸಮಾಧಾನವುಂಟಾಯಿತು. ಅವರಲ್ಲಿ ಅಷ್ಟೆಲ್ಲ ವಿದ್ವತ್ತಿದ್ದರೂ ಜನಾಂಗ ಭೇದದ ಸಣ್ಣತನಕ್ಕೆ ಅವರು ಬಲಿಯಾಗಿರುವರೆಂದು ಸ್ವಾಮೀಜಿ ನಂತರ ಹೇಳಿದರು. ದಕ್ಷಿಣ ಭಾರತದಲ್ಲಿ ಈ ರೀತಿ ಅತೃಪ್ತಿಕರ ಮನೋಭಾವದ ಕೆಲವರನ್ನು ಸ್ವಾಮೀಜಿ ಸಂಧಿಸಿದ್ದರು.

ಮುಂದೆ ಎರಡು-ಮೂರು ದಿನ ಮನೆಯಲ್ಲಿ ನಾವು ನಾವೇ ಇದ್ದೆವು. ಸಂಜೆ ಮಾತ್ರ ಪ್ರೊ.ರಂಗಾಚಾರ್ಯರು ಸ್ವಲ್ಪ ಹೊತ್ತು ಬರುತ್ತಿದ್ದರು. ನನ್ನಲ್ಲಿ ಹಿಂದೂ ಸಾಂಪ್ರದಾಯಿಕತೆ ಅತಿಯೆಂದು ಸ್ವಾಮೀಜಿಯವರಿಗನಿಸಿತು. ಆದ್ದರಿಂದಲೇ ಇರಬೇಕು, ಅವರು ನನ್ನ ಅಭಿರುಚಿಗೆ ಅನುಗುಣವಾದ ವಿಷಯವನ್ನೇ ಹೆಚ್ಚಾಗಿ ಹೇಳಿದರು. ಆಗಾಗ ಕೇವಲ ದೇಶಾಚಾರಗಳಿಗೆ ಅಂಟಿಕೊಳ್ಳುವುದನ್ನು ತೀವ್ರವಾಗಿ ಖಂಡಿಸಿದರು. ನಾನು ದಿನಚರಿ ಬರೆಯುತ್ತಿರಲಿಲ್ಲವಾದುದರಿಂದ ಅವರು ಹೇಳಿದುದನ್ನೆಲ್ಲ ಅದೇ ಕ್ರಮದಲ್ಲಿ ಈಗ ನೆನಪಿಸಿಕೊಂಡು ಹೇಳುವುದು ಕಷ್ಟ. ನಾವೀರ್ವರು ಎಷ್ಟೊ ಸ್ವಾರಸ್ಯಕರ ವಿಷಯಗಳನ್ನು ಕುರಿತು ಚರ್ಚಿಸಿದೆವು. ಉತ್ತರದ ಕಡೆಯಿಂದ ಅತ್ಯಂತ ಪ್ರತಿಭಾವಂತ ಸನ್ಯಾಸಿಗಳೊಬ್ಬರು ನನ್ನ ಮನೆಗೆ ಬಂದಿರುವರೆಂದು ತಿಳಿದು ಕೆಲವೊಮ್ಮೆ ಕೆಲವು ಸಂದರ್ಶಕರು ಬರುತ್ತಿದ್ದರು. ಕೆಲವರು ಸಂತ ಮಹಾಪುರುಷರೆಂದು ಅವರಿಗೆ ಭಕ್ತಿ-ಗೌರವವನ್ನು ತೋರಿಸಲು ಬರುತ್ತಿದ್ದರು.

**ಧರ್ಮದಲ್ಲಿ ಅದರದೇ ಆದ ಮೂಢನಂಬಿಕೆಗಳಿದ್ದರೆ ವಿಜ್ಞಾನದಲ್ಲೂ ಅದರದೇ ಮೂಢನಂಬಿಕೆಗಳಿವೆ.**

ಸ್ವಾಮೀಜಿ ಒಮ್ಮೆ ಯಾರು ತಾವು ಆಧುನಿಕ ಮನೋಭಾವದವರೆಂದೂ ವೈಜ್ಞಾನಿಕ ಪೀಳಿಗೆಯವರೆಂದೂ ಅತಿಶಯೋಕ್ತಿಯಿಂದ ಕೊಚ್ಚಿಕೊಳ್ಳುತ್ತಿದ್ದರೊ ಅವರಿಗೆ ಸರಿಯಾದ ಪ್ರಹಾರವಿತ್ತರು : "ಧರ್ಮದಲ್ಲಿ ಅದರದೇ ಆದ ಮೂಢನಂಬಿಕೆಗಳಿದ್ದರೆ ವಿಜ್ಞಾನದಲ್ಲೂ ಅದರದೇ ಮೂಢನಂಬಿಕೆಗಳಿವೆ." ಯಾಂತ್ರಿಕ

ಮತ್ತು ವಿಕಾಸವಾದಗಳೆರಡೂ ಅಸಮರ್ಪಕ ಮತ್ತು ಅತೃಪ್ತಿಕರವೆಂದು ಸಾಬೀತಾಗಿದ್ದರೂ ಇನ್ನೂ ಅನೇಕ ಮಂದಿ ಇಡೀ ವಿಶ್ವದ ರಹಸ್ಯ ತಮಗೆ ತಿಳಿದಿರುವಂತೆ ಮಾತನಾಡುತ್ತಾರೆ. ಅನೇಕರು ಅಜ್ಞೇಯತಾವಾದ(agnosticism)ವನ್ನು ಸಮರ್ಥಿಸಿಕೊಳ್ಳುತ್ತಾರೆ. ಆದರೆ ಅದು ತನ್ನ ಅಜ್ಞಾನವನ್ನಷ್ಟೆ ಹೊರಪಡಿಸುತ್ತಿದೆ, ಮತ್ತು ಭಾರತೀಯ ಮನೋನಿಗ್ರಹವಿದ್ಯೆಯ ನಿಯಮಗಳನ್ನೂ ಮತ್ತದರ ಸತ್ಯತೆಯನ್ನೂ ಕಡೆಗಣಿಸುತ್ತಿದೆ. ಪಾಶ್ಚಾತ್ಯ ಮನಶ್ಶಾಸ್ತ್ರವು ಪ್ರಜ್ಞಾತೀತ ಸ್ಥಿತಿಯ ಬಗ್ಗೆ ಏನೂ ಹೇಳಲಾರದು. ಐರೋಪ್ಯ ವಿಜ್ಞಾನ ಎಲ್ಲಿ ನಿಲ್ಲುವುದೊ ಭಾರತೀಯ ಮನಶ್ಶಾಸ್ತ್ರ ಅಲ್ಲಿಂದಲೂ ಮುಂದುವರಿದು ಮನುಷ್ಯವನ ಅಸ್ತಿತ್ವದ ಉನ್ನತ ಅವಸ್ಥೆಗಳ ನಿಯಮಗಳನ್ನು ಪ್ರಯೋಗಾತ್ಮಕವಾಗಿ ದೃಷ್ಟಾಂತಗಳ ಮೂಲಕ ವಿವರಿಸುವುದು. ಧರ್ಮವೊಂದೇ, ಅದರಲ್ಲೂ ಭಾರತೀಯ ಧರ್ಮ—ಮಾನವ ಮನಸ್ಸಿನ ರಹಸ್ಯವನ್ನು ಮತ್ತು ಅದರ ಅತಿ ಸೂಕ್ಷ್ಮ ಕಾರ್ಯಗಳನ್ನು ಅರಿತು ಅದರ ಪ್ರಾಪಂಚಿಕ ಆಶೆ-ಆಕಾಂಕ್ಷೆಗಳನ್ನು ನಿಗ್ರಹಿಸಿ ಸತ್ಯವಿರುವುದೊಂದೇ ಉಳಿದುದೆಲ್ಲ ಮಾಯಾಕಲ್ಪಿತ ಎಂಬ ಸಾಕ್ಷಾತ್ಕಾರಕ್ಕೆ ಆಸ್ಪದ ಮಾಡುವುದು.

ಸ್ವಾಮೀಜಿ ಮಾತನಾಡಿದ ಇನ್ನೊಂದು ವಿಚಾರ ಸ್ಥೂಲ ಮತ್ತು ಸೂಕ್ಷ್ಮ ವಿಷಯಗಳಿಗಿರುವ ವ್ಯತ್ಯಾಸ. ಅವರಂದರು: ಇವೆರಡೂ ಮನುಷ್ಯನನ್ನು ಇಂದ್ರಿಯಬದ್ಧನನ್ನಾಗಿ ಮಾಡಿವೆ. ಯಾರು ಇವೆರಡನ್ನೂ ಮೀರಿಹೋಗುವರೊ ಅವರು ಮುಕ್ತರಾಗುವರು. ಈ ತುಚ್ಛ ಪ್ರಾಪಂಚಿಕ ಸುಖಭೋಗಗಳಿಗೆ ವಶರಾಗುವುದಿಲ್ಲ. ಸ್ವಾಮೀಜಿ ಜಾತಿಪದ್ಧತಿಯ ಬಗ್ಗೆ ಮಾತನಾಡಿದರು. ಬ್ರಾಹ್ಮಣನು ಎಲ್ಲಿಯವರೆಗೆ ನಿಃಸ್ವಾರ್ಥಕಾರ್ಯದಲ್ಲಿ ತೊಡಗಿರುವನೊ ಮತ್ತು ಮುಕ್ತ ಹಸ್ತದಿಂದ ತನ್ನ ಜ್ಞಾನ ಸಂಪತ್ತನ್ನು ಇತರರಿಗೆ ನೀಡುವನೋ ಅಲ್ಲಿಯವರೆಗೆ ಬದುಕುಳಿಯುತ್ತಾನೆ—ಎಂದರು ಸ್ವಾಮೀಜಿ. ಅವರಾಡಿದ ಮಾತುಗಳು ಇನ್ನೂ ನನ್ನ ಕಿವಿಯಲ್ಲಿ ಗುಣುಗುಣಿಸುತ್ತಿವೆ : "ಬ್ರಾಹ್ಮಣನು ಭಾರತಕ್ಕೆ ಮಹತ್ಸೇವೆ ಸಲ್ಲಿಸುತ್ತಿರುವನು ಮತ್ತು ಮುಂದೆ ಇನ್ನೂ ಹೆಚ್ಚಿನ ಸೇವೆ ಸಲ್ಲಿಸುವನು." ಮಹಿಳೆಯರ ಸ್ಥಾನಮಾನ ಮತ್ತು ವಿವಾಹ ಈ ವಿಷಯಗಳನ್ನು ಕುರಿತು ಶಾಸ್ತ್ರೀಯ ವಿಧಿ-ನಿಯಮಗಳನ್ನು ಉಲ್ಲಂಘಿಸುವುದನ್ನು ಸ್ವಾಮೀಜಿ ತೀವ್ರವಾಗಿ ವಿರೋಧಿಸಿದರು. ಸ್ತ್ರೀಯರು ಮತ್ತು ನಿಮ್ನವರ್ಗದವರು ಸಂಸ್ಕೃತ ಶಿಕ್ಷಣವನ್ನು ಪಡೆಯಬೇಕು, ಸನಾತನ ಆಧ್ಯಾತ್ಮಿಕ ಸಂಸ್ಕೃತಿಯನ್ನು ಮೈಗೂಡಿಸಿಕೊಳ್ಳಬೇಕು ಮತ್ತು ಋಷಿಗಳ ಆಧ್ಯಾತ್ಮಿಕ ಆದರ್ಶವನ್ನು ಅನುಷ್ಠಾನಕ್ಕೆ ತರಬೇಕು; ಆಗ ಅವರು ತಮ್ಮ ಅನುಭವದ ಮೂಲಕ ತಮ್ಮ ಆವಶ್ಯಕತೆಗಳಾವುದೆಂಬುದನ್ನು ಕಂಡುಕೊಂಡು ತಮ್ಮ ಸಮಸ್ಯೆಗಳನ್ನು ತಾವೇ ಬಗೆಹರಿಸಿಕೊಳ್ಳುವರು.

ಸ್ವಾಮೀಜಿ ಉಪಸ್ಥಿತಿಯ ಮೂರನೆ ಮತ್ತು ನಾಲ್ಕನೆ ದಿನ ನನ್ನ ಅತ್ಯಂತ ಮೆಚ್ಚಿನ ಸ್ನೇಹಿತರಾದ, ಸದ್ಗುಣಸಂಪನ್ನರೂ ಧರ್ಮಭೀರುಗಳೂ ಆದ, ಟ್ರಿವಾಂಕೋರಿನಲ್ಲಿ ವರ್ನಾಕ್ಯುಲರ್ ಇನ್‌ಸ್ಪೆಕ್ಷನ್ ನಿರ್ದೇಶಕರಾದ ಶ್ರೀ ಎಸ್. ರಾಮರಾವ್ ಅವರಿಗೆ ಹೇಳಿಕಳಿಸಿದೆ. ರಾಮರಾವ್ ಸ್ವಾಮೀಜಿಯವರ ಆಧ್ಯಾತ್ಮಿಕ ಶಕ್ತಿಯಿಂದ ಭಕ್ತಿಪರವಶತೆಯಿಂದ ಆಕರ್ಷಿತರಾಗಿ ಅವರನ್ನು ತಮ್ಮ ಮನೆಗೆ ಭಿಕ್ಷಕ್ಕೆ ಬರಬೇಕೆಂದು ಕೇಳಿಕೊಂಡರು. ಸ್ವಾಮೀಜಿ ಒಪ್ಪಿಕೊಂಡು ಅವರ ಮನೆಗೆ ಹೋದರು. ಹಿಂದಿರುಗಿ ಬಂದ ಮೇಲೆ ಅವರು ಎಂದಿನಂತೆ ತಮ್ಮ ಚಿತ್ತಾಕರ್ಷಕ ಸಂಭಾಷಣೆಯನ್ನು ಮುಂದುವರಿಸಿದರು. ಒಮ್ಮೆ ರಾಮರಾವ್ ಇಂದ್ರಿಯ-ನಿಗ್ರಹವನ್ನು ವಿವರಿಸಬೇಕೆಂದು ಕೇಳಿದಾಗ ಸ್ವಾಮೀಜಿ ಲೀಲಾಶುಕನ ಕಥೆಯನ್ನು ಕಣ್ಣಿಗೆ ಕಟ್ಟುವಂತೆ ಹೇಳಿದರು. ಅದರಲ್ಲೂ, ಮುಖ್ಯವಾಗಿ ಅವನ ಜೀವನದ ಕೊನೆಯ ಹಂತವನ್ನು ಎಷ್ಟು ಮನೋಜ್ಞವಾಗಿ ಚಿತ್ರಿಸಿದರೆಂದರೆ ಇನ್ನೂ, ಇಪ್ಪತ್ತೊಂದು ವರ್ಷಗಳ ನಂತರವೂ, ಆ ದೃಶ್ಯ ನನ್ನ ಕಣ್ಮುಂದೆ ನಡೆಯುತ್ತಿರುವಂತಿದೆ, ಅದರ ಮೋಹಕತೆ ನನ್ನನ್ನು ಈಗಲೂ ಮುಗ್ಧಗೊಳಿಸುವುದು. ಲೀಲಾಶುಕನು ತನ್ನ ಕಣ್ಣುಗಳನ್ನೇ ನಾಶಪಡಿಸಿಕೊಂಡ ಘಟನೆಯನ್ನು ಹೇಳಿ ಸ್ವಾಮೀಜಿ ಈ ಹೇಳಿಕೆಯೊಂದಿಗೆ ಕಥೆಯನ್ನು ಮುಗಿಸಿದರು: "ಚಂಚಲತರ ಇಂದ್ರಿಯಗಳನ್ನು ನಿಗ್ರಹಿಸಿ ಮನಸ್ಸನ್ನು ಭಗವನ್ಮುಖಿಗೊಳಿಸಲು ಅವಶ್ಯಕವೆನಿಸಿದರೆ ಇಂಥ ಅತಿರೇಕಕ್ಕೂ ಹಿಂಜರಿಯಬಾರದು."

**ಸ್ವಾಮೀಜಿಯವರ ವಿಷಯ ಸಂಪತ್ತಿನ ಪ್ರಮಾಣವನ್ನು ಅಳೆಯುವುದರಲ್ಲಿ ಕಾಲಹರಣ ಮಾಡುವುದಕ್ಕಿಂತ ಅವರ ಆಧ್ಯಾತ್ಮಿಕ ಸಂಪತ್ತಿನಿಂದ ಲಾಭಪಡೆಯುವುದು ಒಳ್ಳೆಯದು.**

ಒಂದು ದಿನ ಬೆಳಿಗ್ಗೆ ಹುಜೂರ್ ಆಫೀಸಿನಲ್ಲಿ ಪೇಶ್ಕಾರರಾದ ತಿವಾರಿ ಪೆರುಮಾಳ್ ಪಿಳ್ಳೈ ಸ್ವಾಮೀಜಿಯವರನ್ನು ನೋಡಲು ಬಂದರು. ಅವರು ಬಂದ ಉದ್ದೇಶ ಪ್ರಪಂಚದ ವಿವಿಧ ಧಾರ್ಮಿಕ ಮತ-ಪಂಥಗಳ ಬಗ್ಗೆ ಸ್ವಾಮೀಜಿಯವರಿಗೆ ಎಷ್ಟರಮಟ್ಟಿಗೆ ಗೊತ್ತಿದೆ ಎಂದು, ಅವರ ಜ್ಞಾನಸಂಪತ್ತನ್ನು ಅಳೆದು ನೋಡುವುದಾಗಿತ್ತು. ಅದ್ವೈತವೇದಾಂತದ ಮೇಲೆ ಕೆಲವು ಆಕ್ಷೇಪಣೆಯೊಂದಿಗೆ ತಮ್ಮ ಮಾತನ್ನು ಪ್ರಾರಂಭಿಸಿದರು. ಆದರೆ ಕೂಡಲೆ ಅವರಿಗೆ ತಿಳಿದುಬಂತು ಸ್ವಾಮೀಜಿ ಅಸಾಮಾನ್ಯ ವ್ಯಕ್ತಿಯೆಂದು. ಅವರ ವಿಷಯ ಸಂಪತ್ತಿನ ಪ್ರಮಾಣವನ್ನು ಅಳೆಯುವುದರಲ್ಲಿ ಕಾಲಹರಣ ಮಾಡುವುದಕ್ಕಿಂತ ಅವರ ಆಧ್ಯಾತ್ಮಿಕ ಸಂಪತ್ತಿನಿಂದ ಲಾಭಪಡೆಯುವುದು ಒಳ್ಳೆಯದೆನಿಸಿತು ಪಿಳ್ಳೈ ಅವರಿಗೆ. ದುರಭಿಮಾನವುಳ್ಳ ಸಂದರ್ಶಕರ ಮಾನಸಿಕ ಸ್ಥಿತಿಯನ್ನು ಕ್ಷಣಾರ್ಧದಲ್ಲಿ ಅರಿತು, ಅವರಿಗರಿವಿಲ್ಲದಂತೆಯೇ ಅವರ ಮನಸ್ಸನ್ನು ಪರಿವರ್ತಿಸಿ ಅವರಿಗೆ ಯೋಗ್ಯವಾದ ಸ್ಫೂರ್ತಿ ಮಾರ್ಗದರ್ಶನವನ್ನು ನೀಡುವ ಒಂದು ಅಪೂರ್ವ ಸಾಮರ್ಥ್ಯವನ್ನು ಸ್ವಾಮೀಜಿಯವರಲ್ಲಿ ಕಂಡೆ.

ಈ ಸಂದರ್ಭದಲ್ಲಿ, ಅವರು ಲಲಿತ-ವಿಸ್ತರದಿಂದ ಬುದ್ಧನ ವೈರಾಗ್ಯವನ್ನು ಕುರಿತಾದ ಕೆಲವು ಶ್ಲೋಕಗಳನ್ನು ಉದ್ಧರಿಸಿದರು. ಅವರು ಎಷ್ಟೊಂದು ಮಧುರವಾಗಿ ಆ ಶ್ಲೋಕಗಳನ್ನು ಹೇಳಿದ

ರೆಂವರೆ ಪಿಳ್ಳೈಯವರ ಹೃದಯ ಕರಗಿತು. ಮುಗ್ಧರಾಗಿ ಕೇಳ ತೊಡಗಿದರು. ಸ್ವಾಮೀಜಿ ಈ ಸಂದರ್ಭವನ್ನು ಸರಿಯಾಗಿ ಉಪಯೋಗಿಸಿಕೊಂಡು ಬುದ್ಧನ ಮಹಾತ್ಯಾಗ, ಅವನ ನಿರಂತರ ಸತ್ಯಾನ್ವೇಷಣೆ, ಅನಂತರ ನಲವತ್ತೈದು ವರ್ಷಗಳ ಅವನ ಅವಿಶ್ರಾಂತ ಧರ್ಮಪ್ರಚಾರ—ಇವನ್ನೆಲ್ಲ ಅಚ್ಚಳಿಯದೆ ಅವರ ಮನಸ್ಸಿನಲ್ಲಿ ಉಳಿಯುವಂತೆ ವಿವರಿಸಿದರು. ಒಂದು ಗಂಟೆಯವರೆಗೂ ಅವರ ಮಾತು ಮುಂದುವರಿಯಿತು. ಪಿಳ್ಳೈರವರ ಮೇಲೆ ಇದು ಅಗಾಧ ಪರಿಣಾಮ ಉಂಟುಮಾಡಿತು. ಅವರು ಈ ಪ್ರಪಂಚದಲ್ಲಿದ್ದಂತೇ ತೋರಲಿಲ್ಲ. ಈ ವ್ಯಾವಹಾರಿಕ ಜೀವನದ ಆಗುಹೋಗುಗಳನ್ನು ಅವರು ಆ ಸಂದರ್ಭದಲ್ಲಿ ಮೀರಿಹೋಗಿದ್ದರೆಂದು ತಿಳಿಸಿದರು. ಹೊರಡುವಾಗ ಮತ್ತೆ ಮತ್ತೆ ಸ್ವಾಮೀಜಿಯವರ ಕಾಲಿಗೆ ಬಿದ್ದು, ಅವರಂಥ ವ್ಯಕ್ತಿಯನ್ನು ತಾನು ನೋಡಿರಲಿಲ್ಲ ಮತ್ತು ಆ ಸಂದರ್ಭವನ್ನು ತಾನೆಂದೂ ಮರೆಯಲಾರೆ ಎಂದು ಹೇಳಿದರು.

ಅಂದು ಮತ್ತು ಮುಂದಿನ ದಿನಗಳಲ್ಲಿ ಅನೇಕ ವಿಷಯಗಳನ್ನು ಕುರಿತು ಮಾತನಾಡಿದೆವು. ಈ ಎಲ್ಲ ವಿಷಯಗಳಲ್ಲಿ ಸ್ವಾಮೀಜಿಯವರ ಅಭಿಪ್ರಾಯ ತಿಳಿಯುವ ಸದವಕಾಶ ನನಗೆ ಒದಗಿತು. ನನಗೀಗ ಎಲ್ಲವೂ ನೆನಪಿಲ್ಲ. ಎರಡು ವಿಷಯಗಳು ಸ್ಪಷ್ಟವಾಗಿ ಮನಸ್ಸಿನಲ್ಲಿ ಉಳಿದಿವೆ. ಒಮ್ಮೆ ನಾನು ಅವರನ್ನು ಸಾರ್ವಜನಿಕ ಭಾಷಣ ಮಾಡಲು ಕೇಳಿಕೊಂಡೆ. ತಾವು ಹಿಂದೆಂದೂ ಸಾರ್ವಜನಿಕ ಭಾಷಣ ಮಾಡಿಲ್ಲವೆಂದೂ ಈಗ ಮಾಡಲು ಹೋದರೆ ಹಾಸ್ಯಾಸ್ಪದವಾಗುವುದೆಂದೂ ಹೇಳಿದರು. "ಹಾಗಿದ್ದರೆ ಮುಂದೆ ಚಿಕಾಗೊ ವಿಶ್ವಧರ್ಮಸಮ್ಮೇಳನದಲ್ಲಿ ಹೇಗೆ ಮಾತನಾಡಬಲ್ಲಿರಿ?" ಎಂದು ಕೇಳಿದೆ. ಅದಕ್ಕೆ ಅವರಂದರು, ತಾನು ಮಾತನಾಡುವುದು ಭಗವಂತನ ಇಚ್ಛೆಯಾದರೆ ಅವನೇ ಅದರ ಸಾಮರ್ಥ್ಯವನ್ನೂ ನೀಡುವನು ಎಂದು. ನನಗೆ ಇದರಲ್ಲಿ ಅಷ್ಟೊಂದು ನಂಬಿಕೆಯಿಲ್ಲವೆಂದಾಗ ಅವರು ಕಿಡಿ-ಕಿಡಿಯಾಗಿ ವಾಕ್‌ಪ್ರಹಾರದಿಂದ ನನ್ನನ್ನು ನಮ್ರಗೊಳಿಸಿದರು. ಬಾಹ್ಯಾಚರಣೆಯಲ್ಲಿ ಅಷ್ಟೊಂದು ಸಾಂಪ್ರದಾಯಿಕತೆ ಇದ್ದರೂ ಆಂತರ್ಯದಲ್ಲಿ ನಾನೊಬ್ಬ ಸಂಶಯವಾದಿ ಎಂದು ನನ್ನನ್ನು ಜರಿದರು.

ಅವರು ನಮ್ಮ ಮನೆಯಲ್ಲಿ ಇದ್ದಷ್ಟು ಕಾಲವೂ ಮನೆಯವರೆಲ್ಲರ ಹೃದಯವನ್ನು ಗೆದ್ದರು. ಅವರ ವ್ಯಕ್ತಿತ್ವದ ಮಾಧುರ್ಯ, ಆ ಮಾರ್ದವತೆ, ಅವರ ಆ ಕೃಪಾದೃಷ್ಟಿ ಮತ್ತು ವ್ಯಕ್ತಿಗಾಂಭೀರ್ಯ —ಇವು ನಮ್ಮೆಲ್ಲರ ಮನಸ್ಸನ್ನು ಸೆರೆಹಿಡಿದವು. ನನ್ನ ಗಂಡು ಮಕ್ಕಳೆಲ್ಲ ಅವರೊಡನೆಯೇ ಇರುತ್ತಿದ್ದರು. ಅವರಲ್ಲಿ ಒಬ್ಬನಂತೂ ಇಂದಿಗೂ ಆ ಸವಿನೆನಪುಗಳನ್ನು ಮೆಲಕು ಹಾಕುತ್ತಿರುವನು. ಸ್ವಾಮೀಜಿ ಅನೇಕ ತಮಿಳು ಶಬ್ದಗಳನ್ನು ಕಲಿತು ನಮ್ಮ ಮನೆಯ ಅಡುಗೆಯವನೊಡನೆ ತಮಿಳಿನಲ್ಲಿ ಮಾತನಾಡುವುದರಲ್ಲಿ ಒಂದು ಆನಂದವನ್ನು ಕಾಣುತ್ತಿದ್ದರು. ಅಪರಿಚಿತರೊಬ್ಬರು ನಮ್ಮೊಡನಿರುವರೆಂದು ನಮಗನಿಸಲೇ ಇಲ್ಲ. ಅವರು ಹೊರಟಾಗ ನಮ್ಮ ಮನೆಯಿಂದ ಒಂದು ಬೆಳಕು ಹೊರಟಂತಾಯಿತು.

೧೮೯೨, ಡಿಸೆಂಬರ್ ೨೨ರಂದು ಮಿ. ಭಟ್ಟಾಚಾರ್ಯರೊಡನೆ ಅವರು ಹೊರಟಾಗ ಒಂದು ಘಟನೆ ಸಂಭವಿಸಿತು. ಅವರು ಇನ್ನೇನು ಹೊರಡಬೇಕೆಂದಿರುವಾಗ ಆ ಊರಿನ ದೊಡ್ಡ ಸಂಸ್ಕೃತ ಪಂಡಿತ ಪಂಚೇಶ್ವರ ಶಾಸ್ತ್ರಿಗಳು ಸ್ವಾಮಿಗಳನ್ನು ನೋಡಲು ಬಂದರು. ಉತ್ತರದಿಂದ ವಿದ್ವತ್ಪೂರ್ಣ ಸಂನ್ಯಾಸಿಗಳೊಬ್ಬರು ನಮ್ಮ ಮನೆಯಲ್ಲಿರುವರೆಂದು ಅವರು ಕೇಳಿದ್ದರು. ಆದರೆ ಅನಾರೋಗ್ಯದ ನಿಮಿತ್ತ ಇದುವರೆಗೂ ಅವರಿಗೆ ಬರಲಾಗಿರಲಿಲ್ಲ. ಅವರಿಗೆ ಸ್ವಾಮೀಜಿಯವರೊಡನೆ ಮಾತನಾಡಬೇಕೆಂಬ ಕುತೂಹಲ. ಸ್ವಾಮೀಜಿಯವರು ಭಟ್ಟಾಚಾರ್ಯರೊಡನೆ ಮೆಟ್ಟಿಲಿನಿಂದಿಳಿದು ಬರುತ್ತಿದ್ದರು. ಒಂದು ನಿಮಿಷವಾದರೂ ಸ್ವಾಮೀಜಿಯವರೊಡನೆ ಮಾತನಾಡಲು ಅವಕಾಶ ಮಾಡಿಕೊಡಬೇಕೆಂದು ಪಂಡಿತರು ನನ್ನನ್ನು ಅತ್ಯಂತ ಕಳಕಳಿಯಿಂದ ಕೇಳಿಕೊಂಡರು. ನಾನು ಸ್ವಾಮೀಜಿಯವರಿಗೆ ಇದನ್ನು ತಿಳಿಸಿದಾಗ ಅವರು ಒಪ್ಪಿ ಪಂಡಿತರೊಡನೆ ಏಳೆಂಟು ನಿಮಿಷ ಸಂಸ್ಕೃತದಲ್ಲಿಯೇ ಮಾತನಾಡಿದರು. ನನಗಾಗ ಸಂಸ್ಕೃತ ಬರುತ್ತಿರಲಿಲ್ಲ. ಆದ್ದರಿಂದ ಅವರು ಏನು ಮಾತನಾಡಿದರೆಂಬುದು ನನಗೆ ಅರ್ಥವಾಗಲಿಲ್ಲ. ಅನಂತರ ಪಂಡಿತರು ಹೇಳಿದರು ವ್ಯಾಕರಣದ ಜಟಿಲ ವಿಷಯವನ್ನು ಕುರಿತು ತಾವು ಮಾತನಾಡಿದೆವೆಂದು. ಆ ಅಲ್ಪ ಸಮಯದಲ್ಲೂ, ಸಂಸ್ಕೃತ ವ್ಯಾಕರಣದಲ್ಲಿ ಸ್ವಾಮೀಜಿಯವರಲ್ಲಿದ್ದ ಪ್ರಾವೀಣ್ಯ ಹಾಗೂ ಆ ಭಾಷೆಯ ಮೇಲೆ ಅವರಿಗಿದ್ದ ಪ್ರಭುತ್ವ ವ್ಯಕ್ತವಾಗುತ್ತಿತ್ತು.

**ಸ್ವಾಮೀಜಿಯವರ ಮಹೋನ್ನತ ವ್ಯಕ್ತಿತ್ವ ಮತ್ತು ಅದ್ಭುತ ಜೀವನ ಇತಿಹಾಸದಲ್ಲಿ ಒಂದು ನವೋದಯದ ಗುರುತಾಗಿವೆ.**

ಇದರೊಂದಿಗೆ ಸ್ವಾಮೀಜಿಯವರ ಒಂಬತ್ತು ದಿನಗಳ ನನ್ನ ಮನೆಯ ವಾಸ ಸಮಾಪ್ತಿಗೊಂಡಿತು. ಈಗ ಆ ಒಂಬತ್ತು ದಿನಗಳನ್ನು ನೆನೆಸಿಕೊಂಡರೆ ಆಶ್ಚರ್ಯವೆನಿಸುತ್ತದೆ. ಆ ದಿನಗಳು ಅಳಿಸಲಾಗದ ಪರಿಣಾಮವನ್ನುಂಟುಮಾಡಿವೆ. ಅವರ ಮಹೋನ್ನತ ವ್ಯಕ್ತಿತ್ವ ಮತ್ತು ಅದ್ಭುತ ಜೀವನ ಇತಿಹಾಸದಲ್ಲಿ ಒಂದು ನವೋದಯದ ಗುರುತಾಗಿವೆ. ಅವರ ಜೀವನದ ವೈಶಿಷ್ಟ್ಯ ಇನ್ನೂ ತಿಳಿಯಬೇಕಾಗಿದೆ. ಅವರನ್ನು ನಿಕಟವಾಗಿ ತಿಳಿದಿರುವ ಭಾಗ್ಯಶಾಲಿಗಳಿಗೆ ಅವರು ಈ ಪುಣ್ಯಭೂಮಿಯನ್ನು ತಮ್ಮ ದಿವ್ಯಪ್ರಭೆಯಿಂದ ಬೆಳಗಿಸಿದ ಅಮರ ದಿವ್ಯಪುರುಷರ ಸಾಲಿಗೆ ಸೇರುತ್ತಾರೆ. ಪ್ರಾಚ್ಯ ಪಾಶ್ಚಾತ್ಯಗಳೆರಡರಲ್ಲೂ ಮಾನವ ಕೋಟಿಯ ಹೃದಯವನ್ನು ಗೆದ್ದು, ಬೆಸೆದು ಒಂದಾಗಿಸಿದ ಈ ಮಹಾಪುರುಷನ ನೆನಪುಗಳನ್ನು ಚಿತ್ರಿಸುವುದು ಅತ್ಯಾನಂದಕರ.

❑